## ಕಲ್ಲಿನ ಗಂಟೆ!

ಸಾಮಾನ್ಯವಾಗಿ ಕಂಚು, ಹಿತ್ತಾಳೆ, ಮಿಶ್ರಲೋಹಗಳಲ್ಲಿ ತಯಾರಿಸುವ ಗಂಟೆಗಳು ಸಾಮಾನ್ಯವಾಗಿ ದೇವಾಲಯ, ಚರ್ಚ್, ವಿಹಾರಗಳಲ್ಲಿ ಕಾಣ ಸಿಗುತ್ತವೆ. ಆದರೆ ಇಲ್ಲೊಂದು ಗಂಟೆ ಇದೆ ನೋಡಿ! ಇದನ್ನು ಮಾಡಿರುವುದು 'ಕಡೆದಿರುವ ಕಲ್ಲಿನಿಂದ'! ಅಚ್ಚರಿಯಾಗಬೇಡಿ ಇದು ಸತ್ಯ. ಸಾಮಾನ್ಯವಾಗಿ ಕಲ್ಲಿನ ಗಂಟೆಯಂತಹ ಆಕೃತಿ ಮೂಡಿಸುವುದು ಶಿಲ್ಪ ಕಲಾವಿದರಿಗೆ ಒಂದು ರೀತಿಯ ಸವಾಲೇ ಆಗಿರುತ್ತದೆ. ಒಳಗಡೆ ನಾಲಿಗೆ ಇಲ್ಲದ ಈ ಗಂಟೆಯನ್ನು ಅದಕ್ಕಾಗಿಯೇ ನಿರ್ಮಿಸಿದ ಮಂಟಪ ಒಂದರಲ್ಲಿ ನೇತು ಹಾಕಲಾಗಿದೆ. ಇದರ ಹೊರಮೈಯನ್ನು ಲಘುವಾಗಿ ಬೆರಳಿನಿಂದ ತಟ್ಟಿದರೆ ಲೋಹದ ಜಾಗಟೆಯಂತಹ ಶಬ್ದವನ್ನು ಹೊರ ಸೂಸುತ್ತದೆ! ಈ ಎರಡು ವಿಚಾರಕ್ಕೆ ನಾವು ಶಿಲ್ಪಿಯನ್ನು ಮೆಚ್ಚಲೇ ಬೇಕಾಗುತ್ತದೆ. ಅಂದಹಾಗೆ ಇಂತಹ ವಿಶೇಷ ವಿಚಿತ್ರ ಗಂಟೆ ಕಂಡು ಬರುವುದು ತುರುವೇಕೆರೆಯಲ್ಲಿನ ಗಂಗಾಧರೇಶ್ವರ ದೇವಾಲಯದಲ್ಲಿ. ಒಮ್ಮೆ ನೋಡಿ ಬನ್ನಿ.

■ **ಎಸ್. ಓಂಕಾರಯ್ಯ ತವನಿಧಿ, ದಾವಣಗೆರೆ**





## ಮರದೊಳಗೆ ಮರ ಹುಟ್ಟಿ

ಈ ಚಿತ್ರದ ಎಡಗಡೆ ಕಾಣುತ್ತಿರುವುದು ಆಲದ ಮರ, ಬಲಗಡೆ ನಂದಿ ಮರ. ಇವೆರಡೂ ಒಂದಕ್ಕೊಂದು ಸೇರಿಕೊಂಡಂತೆ ಹೆಮ್ಮರಗಳಾಗಿ ಬೆಳೆದು ನಿಂತಿವೆ. ನಂದಿಮರದ ಪೊಟರೆಯೊಳಗೆ ಬಿದ್ದ ಆಲದ ಮರದ ಬೀಜವೊಂದು ಮೊಳೆತು, ಗಿಡವಾಗಿ, ಬಿಳಲು ಬಿಟ್ಟು ನಿಧಾನಕ್ಕೆ ನೆಲಕ್ಕೆ ತಾಗಿ ಬಿಳಲೇ ಕಾಂಡವಾಗಿ ಈಗ ಬೃಹತ್ ಮರವಾಗಿ, ಆಶ್ರಯದಾತ ನಂದಿ ಮರವನ್ನೇ ನಾಶಗೊಳಿಸುವ ಹಂತದಲ್ಲಿದೆ ಈ ಮರ. ಈ 'ಮರ ಮಿಲನ'ವನ್ನು ನೋಡುವುದಾದರೆ, ಶಿವಮೊಗ್ಗ–ಸಾಗರ ಹೆದ್ದಾರಿಯಲ್ಲಿ ಸಿಗುವ ಉಳ್ಳೂರಿನಿಂದ 4 ಕಿ.ಮೀ. ಒಳಗಿರುವ ಜಿಗಳೆಮನೆ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಹಿಂಭಾಗದ ಕ್ರಿಕೆಟ್ ಮೈದಾನದ ಪಕ್ಕದಲ್ಲಿದೆ.

■ **ಹ. ಮಹಾಬಲ, ಹೊಸನಗರ**

## ಬ್ರಹ್ಮ ಕಪಾಲ ಶಿಲೆ

ಬ್ರಹ್ಮ ಕಪಾಲ ಶಿಲೆಯೂ ಹಿಮಾಲಯದ ಬದರಿನಾಥನ ಅಲಕಾನಂದ ನದಿಯ ದಡದಲ್ಲಿದೆ. ಶಿವನು ಬ್ರಹ್ಮನ ಐದನೆಯ ತಲೆಯನ್ನು ಕತ್ತರಿಸಿದನು. ಆ ತಲೆ ಕೆಳಗೆ ಬೀಳದೆ ಶಿವನ ಕೈಗೆ ಅಂಟಿಕೊಂಡಿತು. ಏನು ಮಾಡಿದರೂ ಈ ತಲೆ ಶಿವನ ಕೈ ಬಿಡಲಿಲ್ಲ. ಆಗ ಶಿವ ಬದರಿನಾಥನ ಅಲಕಾನಂದ ನದಿಯ ದಡದಲ್ಲಿ ತಪಸ್ಸು ಮಾಡಿದಾಗ ಈ ತಲೆ ಶಿವನ ಕೈಯಿಂದ ಕೆಳಗೆ ಬಿದ್ದಿತು. ಇದೇ ಬ್ರಹ್ಮ ಕಪಾಲ ಶಿಲೆ ಎಂದೂ ಕರೆಯಲಾಯಿತು.

■ **ಶಶಿರೇಖಾ ನಾಗೇಂದ್ರ, ತುಮಕೂರು**

